ಗಂಧದ ಮರ ಕಳ್ಳಸಾಗಾಣಿಕೆ

(೨೬) ೭೭ ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಧದ ಮರದ ಕಳ್ಳಸಾಗಾಣಿಕೆಯ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸಂಡೂರು ಅರಣ್ಯ ವಿಭಾಗದ ಕೆಲಸಗಾರರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಅರಣ್ಯಾಧಿಕಾರಿಗಳಿಗೆ ವಾಹನವನ್ನು ಒದಗಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಅರಣ್ಯ ಇಲಾಖೆಯ ಇಬ್ಬರು ಅರಣ್ಯ ಪಾಲಕರು ೧೩ ಅರಣ್ಯ ರಕ್ಷಕರು ಸಂಡೂರು ವಲಯದ ಗಂಧದ ಮರಗಳನ್ನು ರಕ್ಷಿಸುತ್ತಿದ್ದಾರೆ. ಇದರೊಂದಿಗೆ ೯ ಅರಣ್ಯ ವೀಕ್ಷಕರನ್ನು ಗಂಧದ ಮರದ ರಕ್ಷಣೆಗೊಸ್ಕರವಾಗಿಯೇ ಪ್ರತ್ಯೇಕವಾಗಿ ದಿನಗೂಲಿಯ ಮೇಲೆ ನೇಮಿಸಲಾಗಿದ್ದು ಅವರು ಕಳ್ಳಸಾಗಾಣಿಕೆದಾರರ ಚಲನವಲನಗಳನ್ನು ನಿಗಾ ಇಟ್ಟಿರುತ್ತಾರೆ. ಎಲ್ಲಿ ಹೆಚ್ಚಿನ ಗಂಧದ ಮರಗಳು ಇವೆಯೋ ಅಲ್ಲಿ ವಿಶೇಷವಾಗಿ ಹಳ್ಳಿಗಳಲ್ಲಿ ರಾತ್ರಿಯಲ್ಲಿ ಗಸ್ತು ಮತ್ತು ಬಿಡಾರವನ್ನು ಮಾಡಲಾಗಿರುತ್ತದೆ. ರಾತ್ರಿ ಶಿಬಿರಗಳನ್ನು ಕ್ರಮಬದ್ಧವಾಗಿ ನೇಮಿಸಲಾಗುತ್ತಿದೆ. ಆಯಕಟ್ಟಿನ ಜಾಗಗಳಲ್ಲಿ ಗುಡಿಸಲುಗಳನ್ನೂ ವಂತಿ ಗ್ರಾಮೀಣ ಪ್ರದೇಶದಲ್ಲಿ ಮತ್ತು ಗ್ರಾಮಗಳ ರೈಲ್ವೆ ನಿಲ್ದಾಣದ ಹತ್ತಿರ ನಿರ್ಮಿಸಲಾಗುತ್ತಿದ್ದು ಕಳ್ಳಸಾಗಾಣಿಕೆದಾರರ ಚಲನವಲನಗಳನ್ನು ವೀಕ್ಷಿಸಲಾಗುತ್ತಿದೆ. ಸಂಡೂರು ವಲಯದ ಅರಣ್ಯಾಧಿಕಾರಿಗಳಿಗೆ ಈ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ಒಂದು ಜೀಪನ್ನು ಸಹ ಅವರಿಗೆ ಒದಗಿಸಲಾಗಿದೆ.

ಹೊಂಬೇಗೌಡ ನಗರದಲ್ಲಿರುವ ವಸತಿ ಗೃಹಗಳಿಗೆ ಹೆಚ್ಚಿನ ಸೌಲಭ್ಯ

೨೭ (೬೬) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೨)ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಜನವರಿ ತಿಂಗಳಲ್ಲಿ ಹೊಂಬೇಗೌಡ ನಗರದಲ್ಲಿರುವ ಸರ್ಕಾರಿ ವಸತಿಗೃಹಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ಸಲುವಾಗಿ ಅಲ್ಲಿಗೆ ಭೇಟಿ ನೀಡಿದುದು ನಿಜವೇ ?

ಆ) ಅಲ್ಲಿನ ನಿವಾಸಿಗಳ ಸಂಘವಾದ ಜಾಗೃತ ಸಮಿತಿ ಜೀವನಭೀಮಾನಗರ ಹಾಗೂ ತಿಮ್ಮೇನಹಳ್ಳಿಯ ವಸತಿ ಗೃಹಗಳಿಗೆ ಕಲ್ಪಿಸಿರುವ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಬೇಕೆಂದು ಕೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಅಧಿಕಾರಿಗಳು ಅದರ ಅಂದಾಜು ಮೆಚ್ಚಗಳನ್ನು ಕಳಂಹಿಸಿರುವುದು ಹಾಗೂ ಅವುಗಳನ್ನು ಸರ್ಕಾರದವರು ಮಂಜೂರು ಮಾಡುವಲ್ಲಿ ತಾರತಮ್ಯವೆಸಗಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಹೊಂಬೇಗೌಡ ನಗರ ಹಾಗೂ ರಾಜಾಜಿನಗರ ವಸತಿಗೃಹಗಳ ತಾಪನ ಸಂಚಾರದ ಸಂಬಂಧದಲ್ಲಿ ಅಲ್ಲಿನ ಸಂಘದವರು ಕಳೆದ ಎರಡು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದಾರೆ ಈ ವಸತಿಗೃಹಗಳನ್ನು ಕಡೆಗಣಿಸಿ ಇತ್ತೀಚೆಗೆ ಬೇಡಿಕೆ ಸಲ್ಲಿಸಿದ್ದ ತಿಮ್ಮೇನಹಳ್ಳಿ ವಸತಿಗೃಹದವರಿಗೆ ತಾವನ ಸಂಚಾರ ಸೌಲಭ್ಯವನ್ನು ಕಲ್ಪಿಸಿರುವುದರ ಔಚಿತ್ಯವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು).—

ಅ) ನಿಜ